ದೇವದಾಸಿಯರ ಮಕ್ಕಳೂ ದುರ್ಲಕ್ಷಿತಕ್ಕೊಳಗಾಗುತ್ತಾರೆ. ಕಾರಣ ಅವರಿಗೆ ತಂದೆ ಯಾರೆಂಬಂದು ಗುರಿತಿಸಲಿಕ್ಕಾಗುವದಿಲ್ಲ. ಇಂತಹ ಮಕ್ಕಳು ಅವರ ತಾಯಂದಿರ ಸ್ಥಾನಮಾನಗಳಿಂದ ಲೈಂಗಿಕ ಶೋಷಣೆಗಾಗಿ ಸಾಗಾಟ ಮತ್ತು ಮಾರಾಟಕ್ಕೆ ಒಳಗಾಗುವಷ್ಟು ಅಸಹಾಯಕರಾಗಿರುತ್ತಾರೆ. ಇನ್ನು ಕೆಲವರಿಗೆ ವಂಶಪಾರಂಪರ್ಯದ ಕೇಡು ಬೇರೆ ಎಲ್ಲಿ ಈ ಧರ್ಮಾಚರಣೆಯ ಕಪಿಮುಷ್ಠಿ ಭದ್ರವಾಗಿದೆಯೋ ಅಲ್ಲಿ ಹೊಸ ಅರ್ಪಣೆಯ ಭೀತಿ ಇದ್ದೇ ಇರುತ್ತದೆ. ಮೆಹಬೂಬನಗರ ಜಿಲ್ಲೆಯಲ್ಲಿ ಜೋಗಿನಿಯರು ಇಂತಹ ಮದುವೆಗಳನ್ನು ನಿಲ್ಲಿಸಿದ್ದಾರೆಂದು ಇತ್ತೀಚಿನ ವರದಿ ತಿಳಿಸುತ್ತದೆ.[4] ಆದರೆ ಚಿತ್ತೂರಿನಲ್ಲಿ ಮಾತಮ್ಮ ಮತ್ತು ಕರ್ನಾಟಕದಲ್ಲಿ ದೇವದಾಸಿ ಅರ್ಪಣೆಯು ಮುಂದುವರಿದ ಬಗ್ಗೆ ವರದಿಗಳು ತಿಳಿಸುತ್ತವೆ.[5] ಜನೇವರಿ 2007 ರಲ್ಲಿ ಕರ್ನಾಟಕದ ರಾಯಚೂರ ಜಿಲ್ಲೆ ಮತ್ತು ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕನಲ್ಲಿ ದೇವದಾಸಿ ಅರ್ಪಣೆ ನಿಷೇದಕ್ಕಾಗಿ ಪೊಲೀಸ್ ಕಾರ್ಯಚರಣೆ ಮಾಡಬೇಕಾಯಿತೆಂಬ ಸಮಾಚಾರವನ್ನು ಕನ್ನಡ ದಿನಪತ್ರಿಕೆ 'ಪ್ರಜಾವಾಣಿ' ಯಲ್ಲಿ ವರದಿಯಾಗಿದೆ.[6]

1980 ದಶಕದ ಉತ್ತರಾರ್ಧದಲ್ಲಿ ಎರಡೂ ರಾಜ್ಯಗಳಲ್ಲಿ ಈ ಆಚರಣೆಗಳನ್ನು ನಿರ್ಮೂಲನೆ ಮಾಡುವ ದಿಸೆಯಲ್ಲಿ ಅರ್ಥಪೂರ್ಣ ಪ್ರಯತ್ನಗಳು ನಡೆದವು. ಬೆಳಗಾವಿ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯ ದೇವದಾಸಿಯರು ಮಹಾನಗರಗಳ ವೇಶ್ಯಾಗೃಹಗಳಿಗೆ ಲೈಂಗಿಕ ವೃತ್ತಿಗಿಳಿಯುತ್ತಿರುವದನ್ನು ಗಮನಿಸಿ ಅಲ್ಲಿ ಆದ್ಯತೆಯನ್ನು ನೀಡಲಾಯಿತು. ಈ ಸಂಗತಿಯ ಮುಂದುವರಿಕೆಯನ್ನು ಅಧಿಕೃತವಾಗಿ ಅಲ್ಲಗಳೆಯಲಾಗಿದ್ದರೂ ಸಹ ಯುವತಿಯರನ್ನು ಲೈಂಗಿಕವಾಗಿ ಮಾರಾಟಕ್ಕೆಳಸುವ ಕೆಲಸಗಳಿಗಾಗಿ ಸಾಗಾಟ ಮಾಡುವ, ಎಚ್. ಆಯ್. ವ್ಹಿ. ಸೋಂಕಿಗೆ ಅತ್ಯಂತ ಶಕ್ಯತೆಯನ್ನೊದಗಿಸುವ ಅದರಂತೆ ಲೈಂಗಿಕ ಅವಯವಗಳಿಗೆ ತಗಲುವ ರೋಗಗಳಿಗೆ ಬಲಿಯಾಗುವ ಹಾಗೂ ಅವಯವಗಳ ಆರೋಗ್ಯಕ್ಕೆ ತಂದರೆಯ್ಯುವಾಗುವ ಈ ಮಹತ್ವದ ಕಾಳಜಿಗಳು ಮಾತ್ರ ಮುಂದುವರಿದಿವೆ ಎಂಬುದು ಸತ್ಯ.

ಭ್ರಷ್ಟ ಮತ್ತು ರಹಸ್ಯ ಮಾರ್ಗಗಳಿಂದ ಈ ಆಚರಣೆಗಳನ್ನು ಶಾಶ್ವತಗೊಳಿಸುವದನ್ನು ವಿರೋಧಿಸಲು, ಅನೂಕೂಲತೆ ಕಾರ್ಯಕ್ರಮಗಳನ್ನು ಬಲಿಪಶುಗಳಿಗೆ ಮತ್ತು ಅವರ ಮಕ್ಕಳಿಗೆ ತಲುಪಿಸುವ ಸಲುವಾಗಿ ಮತ್ತು ಅವರು ತಾರತಮ್ಯಗಳಿಂದ ಬಳಲುವದನ್ನು ತಪ್ಪಿಸಲು ದೇವದಾಸಿ ಮತ್ತು ಅವರ ಮಕ್ಕಳ ಅಸಹಾಯಕ ಗುಂಪುಗಳ ಪರವಾಗಿ ಪ್ರಭಾವ ಬೀರುವಂತಹ ಕೆಲಸ ಅತ್ಯಂತ ಅವಶ್ಯಕತೆ ಇದೆ. 1990 ರ ದಶಕದಲ್ಲಿ ಮಾಡಿದ ಒಳ್ಳೆಯ ಪ್ರಯತ್ನಗಳನ್ನು ನಂತರ ಕೈ ಬಿಡಲಾಗಿದೆ. ಎಂಬ ವಾರ್ತೆ ಇದೆ ಆದುದರಿಂದ ಈ ಪ್ರಯತ್ನಗಳಿಗೆ ಮತ್ತೆ ಜೀವ ತುಂಬುವ ಕಾರ್ಯಕ್ಕೆ ಪ್ರಭಾವ ಬೀರುವದು ಸಮಯೋಚಿತವಾಗಬಹುದಾಗಿದೆ.

## ಈ ಆಚರಣೆಗಳು ಗುಲಾಮಗಿರಿ ಎಂದೆನಿಸಿಕೊಳ್ಳುವುದೇಕೆ ?

ಜಗತ್ತಿನ ಯಾವುದೇ ಮೂಲೆಯಲ್ಲಿರುವಂತೆ, ಅಧಿಕಾರಿಗಳು ಮತ್ತು ನಾಗರಿಕರಲ್ಲಿ ಒಂದು ಸಾಮಾನ್ಯ ತಿಳುವಳಿಕೆ ಇರುವುದೇನೆಂದರೆ ಈ ಸಂಶೋಧನೆಯ ಉದ್ದಕ್ಕೂ ಎದುರಿಸಬೇಕಾಗಿ ಬಂದಿರುವ, ಗುಲಾಮ ಗಿರಿ ಎಂದರೆ ಸಾಗರಾದಾಚೆಯ ಮಾನವ ಗುಲಾಮರ ಮಾರಾಟ, ನಿಚ್ಚಳ ಖರೀದಿ, ಮತ್ತು ಅವರ ಮಾಲಕೀ ಆಗಿರುತ್ತದೆಂಬುದು. ಆದರೆ ಇದು ದೇವದಾಸಿ ಆಗುವದರಿಂದ ಅವರಿಗೆ ಅನ್ವಯವಾಗುವದಿಲ್ಲವಾದರು ಗುಲಾಮಗಿರಿ ನಿರ್ಮೂಲನೆಯಿಂದ ವಿಷಯದ ಮೇಲಿನ ಯುನೈಟೆಡ್ ನೇಶನ್ಸ್ ಸಪ್ಲೆಮೆಂಟರಿ ಕನ್ವಿನ್ಶನ, ಗುಲಾಮರ ಮಾರಾಟ ಸಂಸ್ಥೆ ಮತ್ತು ಅಥವಾ ಇಲ್ಲದೆಯಲ್ಲಾ ಇದೆ ಮಾದರಿಯ ಆಚರಣೆಗಳು ಸಂಸ್ಥೆಗಳು 1956 ಕಲಮು 1 (d) ನಿಷೇದಿಸುವ ವ್ಯಾಖ್ಯೆ ಇಂತಿದೆ. ಯಾವುದೇ ಸಂಸ್ಥೆ ಅಥವಾ ಆಚರಣೆಯಿಂದ ಅಥವಾ ಇಲ್ಲದೆವೂ ಶೋಷಣೆಯ ಉದ್ದೇಶದಿಂದ 18 ವರ್ಷಕ್ಕೂ ಕೆಳಗಿರುವ ಮಗು ಅಥವಾ ಹದಿಹರಿಯಾ ವ್ಯೆಶ್ಯೆಯನ್ನು ಸಹಜವಾದ ತಂದೆ ತಾಯಿಂದ ಅಥವಾ ಹಕ್ಕು ಸಂರಕ್ಷಣಾದಾರನಿಂದ ಕೊಡಲ್ಪಡುವದು ಗುಲಾಮಗಿರಿ ಎನಿಸಿಕೊಳ್ಳುತ್ತದೆ.

ಹಲವಾರು ಅಂತಾರಾಷ್ಟ್ರೀಯ ಒಡಂಬಡಿಕೆಗಳು 1989 ರ ಮಕ್ಕಳ ಹಕ್ಕುಗಳ ವಿಶ್ವಸಮ್ಮೇಳನ್ನೊಳಗೊಂಡು ನಮೂದು ಮಾಡಿರುವ ಅಂಶಗಳ ಪ್ರಕಾರ ದೇವದಾಸಿಯರು ತಮ್ಮ ಮನವಾಧಿಕಾರಿಗಳಿಂದ ವಂಚಿತರಾಗುತ್ತಿರುವದನ್ನು ಗಮನಿಸಬಹುದಾಗಿದೆ. ಅವು ಇಂತಿವೆ.

- ಕುಟುಂಬದ ಸದಸ್ಯರು ಮತ್ತು ಗ್ರಾಮ ಮುಖಂಡರು ಅವರ ಒಪ್ಪಿಗೆಯಿಲ್ಲದೆ ಅವರನ್ನು ಅರ್ಪಣೆ ಮಾಡಿರುತ್ತಾರೆ. ದೇವದಾಸಿ, ಜೋಗಿನಿ, ಮಾತಮ್ಮ ಇವುಗಳಲ್ಲೇನಿದೆ ಎಂಬುದರ ಬಗ್ಗೆ ಸಾಮಾನ್ಯವಾಗಿ ಮಕ್ಕಳಿಗೆ ಯಾವುದೇ ತಿಳುವಳಿಕೆಯ ಇರುವದಿಲ್ಲ.

- ಅವರು ಸ್ವತಂತ್ರರಾಗಿರುವುದಿಲ್ಲ. ಅಂದರೆ ಅವರು ದೇವತೆಯ ಸೇವಕರಾಗಿರುವದರಿಂದ ತಮ್ಮ ಜೀವಿತದ ಅಥವಾ ಜೀವನದ ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳಲು ಬಾರದಷ್ಟು ಅವರು ಸಮುದಾಯದ ಮತ್ತು ಭಕ್ತಾದಿಗಳ ಸಾಮಾನ್ಯ ಆಸ್ತಿ ಆಗಿರುತ್ತಾರೆ.

ಅವರು ಬಹು ಜನರು ಲೈಂಗಿಕ ತೃಷೆಗಳಿಗಾಗಿ, ಯಾವತ್ತೂ ಬೇಡಿಕೆಯಿಂದಾಗಿ, ಲೈಂಗಿಕ ಶೋಷಣೆಗೊಳಪಡುತ್ತಿರುತ್ತಾರೆ.

ಅವರು ಸಾಮಾನ್ಯವಾಗಿ ಮದುವೆಯಾಗಿ ಗೃಹಿಣಿಯರಂತೆ ಬದುಕು ಸಾಗಿಸುವದನ್ನು ಪ್ರತಿಬಂಧಿಸಲಾಗಿರುತ್ತದೆ. ಅಲ್ಲದೇ ಗಂಡ ಅಥವಾ ಜೀವನ ಸಂಗಾತಿ ಇದ್ದರೂ ಸಹ ಸಾಮಾನ್ಯ ಹೆಂಡಿತಿಯರಾಗಿ ಮಕ್ಕಳ ತಾಯಂದಿರಾಗಿ ಜೀವನವನ್ನು ಆನಂದಿಸುವಂತಿಲ್ಲ.

ಶೋಷಣೆ, ತಾರತಮ್ಯ, ಮೌಖಿಕ ದೌರ್ಜನ್ಯ ಮತ್ತು ಅವಹೇಳನಗಳಿಂದ ಸಂರಕ್ಷಣೆಯನ್ನು ಅವರಿಗೆ ನಿರಾಕರಿಸಲಾಗಿರುವುದಲ್ಲದೆ ಆರೋಗ್ಯ, ಶಿಕ್ಷಣ ಮತ್ತು ಸರಿಯಾದ ಗಳಿಕೆಯ ಹಕ್ಕುಗಳನ್ನು ನೀಡಲಾಗುವದಿಲ್ಲ.

ಲೈಂಗಿಕ ಶೋಷಣೆ ಮತ್ತು ಮಾರಾಟ ಹಾಗೂ ಸಾಗಾಟಗಳಿಗೆ ಸಹಜ ಒಳಪಡುವಷ್ಟು ಅಸಹಾಯಕರಾಗಿರುತ್ತಾರೆ. ಅವರ ಮಕ್ಕಳು ಜನನದ ಸ್ಥಾನಮಾನದಿಂದಲೇ ಅಸಹಾಯಕರಾಗಿರುತ್ತಾರೆ.

ಅವರು ಸಾಮಾಜಿಕ ಎಲ್ಲಸ್ಥರಗಳಿಂದ ತಾರತಮ್ಯಕ್ಕೆ ಒಳಗಾಗುತ್ತಾರೆ. ತಮ್ಮ ಪವಿತ್ರ ಸ್ಥಾನಮಾನವೂ ಅವರನ್ನು ರಕ್ಷಿಸುವದಿಲ್ಲ.

ಸಾಂಸ್ಕೃತಿಕವಾಗಿ ಜೋಗಿನಿ, ಮಾತಮ್ಮ, ದೇವದಾಸಿ, ಸ್ಥಾನಮಾನಗಳಿಂದ ಹೊರಬರುವಂತಿಲ್ಲ. ಅದು ವಂಶಪಾರಂಪರ್ಯವಾಗಿ ಜೀವನದುದ್ದಕ್ಕೂ ಇರುತ್ತದೆ.

ಅವರನ್ನು ಹೆಸರಿನಿಂದ ಕರೆಯದೇ ಜೋಗಿನಿ ಮಾತಮ್ಮ ಮತ್ತು ದೇವದಾಸಿ ಎಂದೇ ಕರೆಯಲಾಗುತ್ತದೆ, ಅವರನ್ನು ಹೆಸರಿನಿಂದ ಗುರುತಿಸಲಾಗುವದಿಲ.

## ಆಚರಣೆಯ ಇತಿಹಾಸ ಮತ್ತು ಅರ್ಥೈಸುವಿಕೆ

ಹಲವಾರು ಪ್ರಾಚೀನ ನಾಗರೀಕತೆಗಳಲ್ಲಿನ ಧಾರ್ಮಿಕ ಜೀವನದ ವೈಶಿಷ್ಟ್ಯವೆಂದೂ ಹಾಗೂ ದೇವಸ್ಥಾನ ಸೂಳೆಯರೆಂದು ದೇವದಾಸಿ ಪದ್ಧತಿಯ ಆಚರಣೆಯನ್ನು ಸಮೀಕರಿಸಲಾಗಿದೆ. ದೇವರ ಅಥವಾ ಪವಿತ್ರ ಶಿಲ್ಪಗಳ ವಧುವಾಗಿ ಕನ್ಯೆಯರನ್ನು ಅರ್ಪಿಸುವ ವಿಚಾರವನ್ನು ಪ್ರಭಾವಿ ಧರ್ಮಗಳು ಕ್ರಿಸ್ತಧರ್ಮವನ್ನೊಳಗೊಂಡು, ಕೂಡ ಮುಂಚಿನ ನಂಬಿಕೆಗಳಿಂದು ಮುಂದುವರಿಸಿಕೊಂಡು ಬಂದಿವೆ. 'ಧಾರ್ಮಿಕ ವಧುಗಳು' ಸನ್ಯಾಸಿಯರಂತೆ ಪವಿತ್ರ ಮತ್ತು ಪರಿಶುದ್ಧರಿರಬೇಕು, ಅವರು ಪೂಜಾರಿಗಳಿಗೆ ಮತ್ತು ಭಕ್ತಾದಿಗಳಿಗೆ ಲೈಂಗಿಕ ಸೇವೆಯನ್ನು ಒದಗಿಸಬೇಕೆ? ಎಂಬುದರ ಸಂಪ್ರದಾಯಗಳಲ್ಲಿ ಅಲ್ಪ ಭಿನ್ನತೆ ಅಥವಾ ಸಂಲಗ್ನವಾಗಿರಲು ಸಾಧ್ಯ. ಈ ಪವಿತ್ರ ಅಪವಿತ್ರಗಳಲ್ಲಿನ ಅದರಂತೆ ಶೀಲ ಅಶ್ಲೀಲಗಳಲ್ಲಿನ ಗೊಂದಲದಲ್ಲಿಯೇ ದೇವದಾಸಿ ಪದ್ಧತಿಯ ಆಚರಣೆ ಮುಂದುವರಿದುಕೊಂಡು ಬಂದಿದೆ.. ಮರಾಠಿ ಭಾಷೆಯಲ್ಲಿನ ಒಂದು ಅನುಭವ ಜನ್ಯ ಮಾತು ಇದರ ದ್ವಂದ್ವ ಸ್ಥಾನಮಾನಕ್ಕೆ ಒಂದು ಉದಾಹರಣೆ : 'ದೇವದಾಸಿ ದೇವರ ಹೆಂಡತಿ ಗ್ರಾಮದ ಎಲ್ಲರ ಹೆಂಡತಿ'' ಪರಂತು, ಭೂತಕಾಲದಲ್ಲಿಯಾಗಲಿ, ವರ್ತಮಾನದಲ್ಲಾಗಲಿ ದೇವದಾಸಿಯರು ಲೈಂಗಿಕವಾಗಿ ತಮ್ಮನ್ನು ಮಾರಿಕೊಂಡು ಬದುಕಬೇಕಾಗಿಲ್ಲ. ಆದುದರಿಂದ ನಿಜ ಅರ್ಥದಲ್ಲಿ ದೇವದಾಸಿಯರನ್ನು ವೇಶ್ಯೆಯರೆಂದು ವರ್ಣಿಸಬೇಕಿಲ್ಲ.

ಪ್ರಾಚೀನ ದ್ರಾವಿಡ ಪದ್ಧತಿಯಲ್ಲಿ ಎಲ್ಲಮ್ಮದೇವಿಯನ್ನು ಫಲವಂತಿಕೆ ದೇವತೆಯೆಂದು ಗುರುತಿಸಲಾಗಿದೆ. ಎಲ್ಲಮ್ಮ ದೇವಿಗೆ ಕನ್ಯೆಯರನ್ನು ಅರ್ಪಿಸಿ ಮದುವೆ ಮಾಡಿಕೊಡುವ ಪದ್ಧತಿ 2000 ವರ್ಷಗಳಿಗಿಂತಲೂ, ಬಹು ಪೂರ್ವದಿಂದಲೂ ಇದೆ. ಬಹು ಪ್ರಾಚೀನ ಕಾಲದಿಂದ ಜೀವಂತಿಕೆಯನ್ನು ಮುಂದುವರಿಸಿಕೊಂಡು ಬಂದ ಈ ಪದ್ಧತಿ ಜಾನಪದ ಮತ್ತು ಧಾರ್ಮಿಕ ಚರಿತ್ರೆಯಲ್ಲಿ ಅಂದಂದಿನ ರಾಜಕೀಯ, ಧಾರ್ಮಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಭಾವದಿಂದ ಪೌರಾಣಿಕದಂತೆ ಕಥೆಯಾಗಿ ನಿಲ್ಲುತ್ತದೆ.

ಕೃಷಿ ಮೂಲದ ಮುಂಚಿನ ಜನರು ಭೂ ಫಲವಂತಿಕೆಯ ಕುರಿತಾಗಿ ದೇವತಾರಾಧನೆಯಾಗಿ ನಿಸರ್ಗದ ಎಲ್ಲ ವಸ್ತುಗಳಾದ ನೀರು, ನದಿ, ಮರ-ಗಿಡಗಳು ಪರ್ವತ ಇತ್ಯಾದಿಗಳಿಗೂ ಹೆಣ್ಣು ಗಂಡು ದೇವತೆಗಳೆಂದು ಕರೆದು ಎಲ್ಲಕ್ಕೂ ಮೂಲಾಧಾರವಾದ ಭೂಮಿಯನ್ನು ತಾಯಿ ದೇವರೆಂದು ಕಲ್ಪಿಸಿ ಅದರಂತೆ ಪದ್ಧತಿಯನ್ನೇ ಹುಟ್ಟು ಹಾಕಿದರು. ಭೂಮಿಯ ಫಲವಂತಿಕೆ ಉಳಿಯಬೇಕಾದರೆ ನೈಜ ಸಂಯೋಗ ಬೇಕಿತ್ತು. ಬರಗಾಲ ಅಥವಾ ಕೃಷಿ ಉತ್ಪಾದನೆಯಲ್ಲಿ ಕೊರತೆಯಾದರೆ ಅವು ದೊಡ್ಡದಾದ ಸಂಕಟ ಸ್ಥಿತಿ ಎಂದು ಭಾವಿಸಿದರು ಇಂತಹ ಸಂಕಟವನ್ನು ನಿವಾರಿಸಲು ಭೂಸಂಯೋಗದ ಸಂಕೇತವಾಗಿ ಮಾನಸಿ ಲೈಂಗಿಕ ಸಂಯೋಗ ಸಂಕೇತವಾಗಿ ದೇವರಿಗೆ ಕನ್ಯೆಯರನ್ನು ಅರ್ಪಿಸುವ ತನ್ಮೂಲಕ ಭಕ್ತಾದಿಗಳಲ್ಲಿ ಫಲವಂತಿಕೆಯ ಬಗ್ಗೆ ತಿಳುವಳಿಕೆ ಬೆಳೆಸಿಕೊಳ್ಳುವುದನ್ನು ರೂಢಿಗೊಳಿಸಿದ್ದು ಲೈಂಗಿಕತೆಯನ್ನು ತ್ಯಾಗ ಮಾಡುವದರಿಂದ ಫಲವಂತಿಕೆ ವೃದ್ಧಿಸುತ್ತದೆ ಎಂಬ ನಂಬಿಕೆ ದೃಢವಾಯಿತು. ಇದರಿಂದ ಗಂಡು ಹೆಣ್ಣು ದೇವರುಗಳ ಮತ್ತು ಅವರ ಎಲ್ಲಂದದ ಸೇವೆಗಾಗಿ ಮುಡಿಪಾಗಿಡುವದು ಅದರಂತೆ ವಿಶ್ವಾಸ ಭಾವನೆಯನ್ನು ತಳೆದು ಅದನ್ನು ಮುಂದುವರಿಸಿಕೊಂಡು ಬರಲಾಯಿತು.

ಈ ಪದ್ಧತಿ ಜಾನಪದ ಧರ್ಮದಲ್ಲಿ ಉಗಮಿಸಿ ನಂತರ ಜೈನ, ಬುದ್ಧ ಹಾಗೂ ಹಿಂದೂ ಧರ್ಮಗಳು ಅನುಸರಿಸಿಕೊಂಡು ಬಂದವು. ತಾಯಿ ದೇವತೆಯು ಎಷ್ಟೊಂದು ಶಕ್ತಿಯುತಳಾಗಿದ್ದಳೆಂದರೆ ಇತಿಹಾಸದ ಉದ್ದಕ್ಕೂ ಬದಲಾವಣೆ ಕಂಡ ರಾಜಕೀಯ ಸಾಮಾಜಿಕ ಬದಲಾವಣೆಗಳಲ್ಲೂ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಆಚರಣೆ ಮತ್ತು ನಂಬಿಕೆಗಳನ್ನು ಉದ್ದರದಲ್ಲಿಟ್ಟುಕೊಂಡೇ ಉಳಿದು ಬೆಳೆದುಕೊಂಡು ಬಂದಿತು. ಹಿಂದೂ ಧರ್ಮ ದಿಗ್ವಿಜಯ ಕಾಲದಲ್ಲಿ ಶಿವ ವಿಷ್ಣು ದೇವತೆಗಳೊಂದಿಗೆ ಸಂಬಂಧ ರೂಪಿಸಿ ಸಂಸ್ಕೃತೀಕರಣಗೊಳ್ಳುತ್ತಲೇ ಬಂದಿತು. ಎಲ್ಲಮ್ಮ ಸಂಪ್ರದಾಯವು ವಂಶಪಾರಂಪರ್ಯಗೊಂಡು ದೈವೀ ಪ್ರಭಾವ ಬೆಳೆಸಿಕೊಂಡು ಯುದ್ಧ, ನೈಸರ್ಗಿಕ ವಿಕೋಪ, ಬರಗಾಲ ಪ್ರವಾಹಗಳಿಂದ ಆಸರೆಗೊಂಡು ಯುದ್ಧದಲ್ಲಿ ಗೆದ್ದವರ ಮತ್ತು ಸೈನ್ಯಕ್ಕೆ ಸೇವೆಯ ಬೇಡಿಕೆಯಾಗಿ ವ್ಯಾಪಕವಾಗಿ ಬೆಳೆಯಿತು. ಯುದ್ಧದಿಂದ ಪುರುಷರನ್ನು ಕಳೆದುಕೊಂಡ ಸಮಾಜದಲ್ಲಿ ವೈವಾಹಿಕ ವಯಸ್ಸಿನ ಕನ್ಯೆಯರ ಸಂಖ್ಯೆ ಹೆಚ್ಚಳಗೊಂಡು ಮಧ್ಯಯುರೋಪಿನಲ್ಲಿನ ಸನ್ಯಾಸಿಯರಂತೆ ಇವರನ್ನು ದೇವಸ್ಥಾನಗಳಿಗೆ ಒದಗಿಸಲಾಯಿತು. ದೇವತೆಯು ಫಲವಂತಿಕೆಯನ್ನು ಆಳುವದರಿಂದ ವಿವಾಹ ಸಂದರ್ಭಗಳಲ್ಲಿ ದೇವಾಲಯಗಳ ಪೂಜಾ ವಿಧಿ-ವಿಧಾನ ಆಚರಣೆ ಮತ್ತು ಉತ್ಸವಗಳಲ್ಲಿ ದೇವದಾಸಿಯರ ಪಾತ್ರವನ್ನು ನಿಗದಿಗೊಳಿಸಲಾಯಿತು. ಮೊಘಲರ ಪೂರ್ವದ ಕಾಲದಲ್ಲಿ ಹಿಂದೂ ಭಾರತ ಪ್ರದೇಶದಲ್ಲಿ ಎಲ್ಲ ದೇವಸ್ಥಾನಗಳಲ್ಲಿ ಮಹಿಳಾ ಗಾಯಕಿಯರನ್ನು ಮತ್ತು ನೃತಗಾರರನ್ನು ಒದಗಿಸುವದು ಸಾಮಾನ್ಯವಾಗಿತ್ತು. ಇವರ ಪರಿಣಿತ ಮನೋರಂಜನೆಯು ಶುಭ ಸಮಾರಂಭ ಮತ್ತು ದೇವತೆಗಳ ಜಾತ್ರೆ - ಹಬ್ಬದ ಕಾಲದ ಮೆರವಣಿಗೆಗಳಲ್ಲಿ ಬಹು ಮಹತ್ವವನ್ನು ಪಡೆದುಕೊಂಡಿತು. ಸ್ಥಳೀಯ ರಾಜ ಮಹಾರಾಜರು ಮತ್ತು ಆಳರಸರು ದೇವಸ್ಥಾನಗಳಿಗೆ ದೇವದಾಸಿಯರ ಅರ್ಪಿಸುವದನ್ನು ಮನ್ನಿಸುವದಲ್ಲದೆ, ತಮ್ಮ ಮನರಂಜನೆಗಾಗಿ ಇವರನ್ನು ಬಳಸಿಕೊಳ್ಳುವದನ್ನು ಅಲ್ಲದೆ ತಮ್ಮ ಅತಿಥಿಗಳಿಗೆ ಇವರ

ಸೇವೆ ಒದಗಿಸುವದನ್ನು ಪ್ರಾರಂಭಿಸಿದರು. ಇದರ ಜೊತೆಗೆ ಇವರ ಲೈಂಗಿಕ ಸೇವೆಯನ್ನು ಪಡೆದುಕೊಳ್ಳುವದು ರೂಢಿಗತವಾಯಿತು. ಮೊಗಲ ಮತ್ತು ಬ್ರಿಟಿಷರ ಆಸ್ಥಾನಗಳಲ್ಲೂ ಆಸ್ಥಾನದ ನರ್ತಕಿಯಾಗಿ ಪ್ರಸಿದ್ಧಿ ಪಡೆದ ಉದಾಹರಣೆಗಳು ಇತಿಹಾಸದಲ್ಲಿ ಲಭ್ಯವಿದೆ. ಅದರಂತೆ ಜಪಾನಿನ ಗೆಯಶಾ ಪದ್ಧತಿಗೆ ಇದನ್ನು ಹೋಲಿಸಬಹುದಾಗಿದೆ.

ಎಲ್ಲಮ್ಮ ಸಂಪ್ರದಾಯವು ಪ್ರಬುದ್ಧವಾಗಿ ಬೆಳೆದು ಹಿಂದೂ ಪೌರಾಣಿಕ ಯುಗದಲ್ಲಿ ಸಾಕಷ್ಟು ಪರಿವರ್ತನೆಯನ್ನು ದೇವದಾಸಿ ಪದ್ಧತಿಯು ಪಡೆಯಿತು. ಹಿಂದೂ ಉಪಧರ್ಮಗಳೆಲ್ಲದರಲ್ಲಿಯೂ ಗಂಡು ದೇವತೆಗಳಿಗೆ ತಮಗಿಂತ ಹೆಚ್ಚಿನವರಲ್ಲದ ಹೆಣ್ಣು ದೇವತೆಗಳೇ ಹೆಂಡಂದಿರಾಗಬೇಕಿತ್ತು. ಇದರಿಂದ ರೇಣುಕಾ ಯಲ್ಲಮ್ಮ ದೇವತೆಯು ಸಂಪ್ರದಾಯದಲ್ಲಿ ಹೊಸ ಬಗೆಯ ಸಂಸ್ಕೃತಿ ಮೂಡಿ ಬಂದಿತು. ರೇಣುಕೆಯು ತನ್ನಲ್ಲಿ ಮಾಂತ್ರಿಕ ಶಕ್ತಿ ಇದ್ದರೂ ಅವಳು ದೇವತೆಯಾಗಲಿಲ್ಲ. ಅಲ್ಲದೆ ಶ್ರೇಷ್ಠಳೂ ಎಂದೆನಿಸಿಕೊಳ್ಳಲಿಲ್ಲ ಇದರಿಂದ ಅವಳಲ್ಲಿ ಮೊದಲಿನ ಸ್ಥಾನ ಮಾನವೂ ಉಳಿಯಲಿಲ್ಲ. ಹಾಗೂ ಅವಳ ದೇವಸ್ಥಾನದ ಪೂಜಾರಿಗಳಲ್ಲಿ ಗಂಡು ಪೂಜಾರಿಗಳು ತಾನಿಕರು (ವ್ಯವಸ್ಥಾಕರು) ಸ್ಥಾನ ಪಡೆದುಕೊಂಡರು. ಹೀಗಾಗಿ ಈ ಪೂಜಾರಿಗಳು ಹಾಗೂ ತಾನಿಕರು ತಮ್ಮ ಬದುಕಿನ ವ್ಯವಸ್ಥೆಗಾಗಿ ದೇವದಾಸಿಯರನ್ನಾಗಿ ಅರ್ಪಿಸಬೇಕೆಂದು ಭಕ್ತಾದಿಗಳಿಗೆ ಆಗ್ರಹಿಸ ತೊಡಗಿದರು. ಈ ವ್ಯವಸ್ಥೆಯಲ್ಲಿ ರೇಣುಕಾ ಎಲ್ಲಮ್ಮಳ ಲೈಂಗಿಕ ಪಾವಿತ್ರ್ಯತೆಯ ಬಗೆಗಿನ ಶಂಕೆ ಅವಳ ಮಗ ಪರಶುರಾಮನಿಂದಲೇ ಆದ ಅವಳ ಹತ್ಯೆ, ಅವಳ ಪುನರ್ಜನ್ಮ ಇತ್ಯಾದಿಗಳ ಕತೆಗಳನ್ನು ಹಾಡುಗಬ್ಬಗಳಾಗಿ ನಾಡಿನ ತುಂಬೆಲ್ಲ ಹರಡಿದರು. ಸವದತ್ತಿಯ ಗುಡ್ಡದ ಮತ್ತು ದೇವಸ್ಥಾನದ ಪರಿಸರದಲ್ಲಿ ಪೌರಾಣಿಕ ಐತಿಹಾಸಿಕ ಪ್ರಾಗೈತಿಹಾಸಿಕ ಕಾಲದಿಂದಲೂ ಗುರುತಿಸಿಕೊಂಡು ಬಂದ ಸುಮಾರು 61 ಐತಿಹ್ಯಗಳನ್ನು ಭಕ್ತಾದಿಗಳು ಇಂದಿಗೂ ಭಕ್ತಿ ಗೌರವಗಳಿಂದ ಕಾಣುತ್ತಾರೆ. ಪೂಜಿಸುತ್ತಾರೆ. ಒಂದು ಮಹತ್ವದ ತಾತ್ವಿಕ ಅಂಶ ಕಂಡು ಬರುವದೇನೆಂದರೆ ರೇಣುಕಾ ಎಲ್ಲಮ್ಮ ಲೈಂಗಿಕ ಅಧಃ ಪತನಗೊಂಡಿದ್ದರೂ ಅವಳ ಪಾವಿತ್ರ್ಯಕ್ಕೆ ಅವಳ ಶ್ರೇಷ್ಠತೆಗೆ ಭಂಗ ತರದೆ ಜ್ಯಾತಿ ವ್ಯವಸ್ಥೆಯ ಕೆಳಸ್ತರದ ಮಹಿಳೆಯೋರ್ವಳನ್ನು ದೇವತೆಯ ಮಟ್ಟದ ಶ್ರೇಷ್ಠತೆಗೆ ಏರಿಸಿದಾಗಿದೆ. ಇದೇ ಅಂಶವನ್ನು ದೇವದಾಸಿ ಪದ್ಧತಿಯಲ್ಲಿ ಅಡಕಗೊಂಡಿದ್ದು ದೇವದಾಸಿಯರನ್ನಾಗಿ ಕೆಳಸ್ತರದ ಹೆಣ್ಣುಗಳನ್ನೇ ಅರ್ಪಣೆ ಮಾಡಿ ಉನ್ನತರೆಲ್ಲರು ಅವರಿಂದ ಲೈಂಗಿಕ ಸೇವೆ ಪಡೆದುಕೊಳ್ಳುವುದಾಗಿದೆ.

ದೇವದಾಸಿ ಪದ್ಧತಿಯ ಆಚರಣೆಯು ಎಷ್ಟೇ ಪೌರಾಣಿಕ ದಂತಕತೆಯ ಶ್ರೇಷ್ಠತೆಯನ್ನು ಸುದೀರ್ಘತೆಯನ್ನು ಉಳ್ಳದ್ದಾಗಿದ್ದರೂ ಹಿಂದೂ ಧರ್ಮದ ಮುಖ್ಯವಾಹಿನಿಯಲ್ಲಿ ರಾಜಕೀಯ ವ್ಯವಸ್ಥೆ ಸಾಮಾಜಿಕ ಆರ್ಥಿಕ ವಾಸ್ತವತೆ ಮತ್ತು ಪಭಲ ವಾಣಿಜ್ಯಿಕ ಆಸಕ್ತಿಯನ್ನು ರೂಢಿಸಿಕೊಂಡು ಬಂದಿದೆ. ಇದು ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಗೆ ಒಳ್ಳೆಯ ರೀತಿಯಲ್ಲಿ ಹೊಂದಿಕೊಂಡು ಸಮಾಜದ ಕೆಳಸ್ತರದ ಹೆಣ್ಣುಮಗಳನ್ನು ವಂಶಪಾರಂಪರ್ಯನಾಗಿ ಪಾವಿತ್ರ್ಯತೆಯ ಮುಖವಾಡದಲ್ಲಿ ಮುಂದುವರೆಸಿಕೊಂಡು ಬರಲಾಗಿದೆ. ಹಿಂದಿನ ಕಾಲದಿಂದಲೂ ದೇವದಾಸಿಯರಲ್ಲಿನ ಸಾಂಪ್ರದಾಯಿಕ ಹಾಡುಗಾರರು, ನೃತ್ಯಗಾರರು ಮತ್ತು ಕಲಾವಂತರೆಲ್ಲರು ಕೂಡಿ ಲೈಂಗಿಕ ವೃತ್ತಿಪರ ಜಾತಿಯನ್ನು ನಿರ್ಮಿಸಿದರೆಂಬ ಬಲವಾದ ತಿಳುವಳಿಕೆ ಇದೆ. ಆದರೆ ಇದು ಒಪ್ಪತಕ್ಕ ವಿಷಯವಲ್ಲ.

ವಂಶಪಾರ್ಯಂಪರತೆ, ಹಿಂದಿನವರ ಅನುಕರಣೆ, ದೇವ-ದೇವತೆಯರನ್ನು ಸಂತೃಪ್ತಿ ಪಡಿಸಲು ಗೈಯುವ ಅರ್ಪಣೆಗಳು ಇದರಿಂದ ಲೈಂಗಿಕ ವ್ಯಾಪರಕ್ಕಾಗಿ ಇಂತಹ ಮಹಿಳೆಯರನ್ನು ತೊಡಗಿಸಲು ಹಾಗೂ ಮುಂಬಯಿ ಪುಣೆಗಳಂತಹ ಮಹಾನಗರಿಗಳ ವೇಶ್ಯಾಗೃಹಗಳನ್ನು ವ್ಯವಸ್ಥಿತವಾಗಿ ಬೆಳೆಸಲು ಸಾಧ್ಯವಾಯಿತು. ಹಾಗೂ ಕೈಗಾರಿಕರಣದಿಂದ ತಮ್ಮ ಹೆಂಡಂದಿರನ್ನು ತಮ್ಮ ತಮ್ಮ ಗಾಮಗಳಲ್ಲಿಯೇ ಬಿಟ್ಟು ವಲಸೆ ಬಂದ ಪುರುಷರು ಈ ಲೈಂಗಿಕ ವ್ಯಾಪಾರದ ಅವಶ್ಯಕ ಸಿದ್ಧ ಗ್ರಾಹಕರಾದರು. ಇತ್ತ ಗ್ರಾಮಗಳಲ್ಲಿಯೇ ಉಳಿದ ದೇವದಾಸಿಯರು ಅನಕ್ಷರತೆ ಅಜ್ಞಾನ, ಮೂಢನಂಬಿಕೆಗಳಿಗೆ ಬಲಿಯಾಗಿ ಗ್ರಾಮದ ಮುಖಂಡರ ಲೈಂಗಿಕ ಆಹಾರವಾದರು. ಬಡತನ ಈ ಪದ್ಧತಿಯನ್ನು ಇಂದಿನವರೆಗೂ ಸುರಕ್ಷಿತವಾಗಿ ಸುವ್ಯವಸ್ಥೆಯಿಂದ ಬೆಳೆಸಿ ಉಳಿಸಿಕೊಂಡು ಬರಲು ಪ್ರಮುಖ ಕಾರಣವಾಯಿತು.

## ದೇವದಾಸಿ ಪ್ರಕಾರಗಳಲ್ಲಿನ ವೈವಿಧ್ಯತೆಗಳು

ಬಹುತೇಕವಾಗಿ ದೇವದಾಸಿ ಪ್ರಕಾರಗಳು ಸಾಮಾನ್ಯ ಗುಣ ಲಕ್ಷಣಗಳನ್ನೇ ಹೊಂದಿವೆ. ಅವು ಇಂತಿವೆ.

- ಅತಿ ಚಿಕ್ಕ ವಯಸ್ಸಿನಲ್ಲಿ ದೇವದಾಸಿಯಾಗಿ ಹೆಣ್ಣುಮಕ್ಕಳ ಅರ್ಪಣೆ.
- ನಂತರ ಕುಲದೇವತೆಗೆ ಮದುವೆ.
- ದೇವತೆಗೆ ವಿವಾಹ ಮಾಡಿದ ತಕ್ಷಣ ಅಥವಾ ಋತುಮತಿಯಾದ ಕೂಡಲೇ ಪ್ರಥಮ ಪ್ರಸ್ಥ ಆಚರಣೆ, ಇದರ ಹಕ್ಕುದಾರ ಸಾಮಾನ್ಯವಾಗಿ ದೇವಸ್ಥಾನದ ಪೂಜಾರಿ ಅಥವಾ ಸಮಾಜದ ಮುಖಂಡ ಅಥವಾ ಅದಕ್ಕಾಗಿ ಸಾಕಷ್ಟು ಹಣ ನೀಡಿದಾತ.
- ಇದಾದ ನಂತರ ಅವಳು ಜನಸಾಮಾನ್ಯರ ಉಪಭೋಗಕ್ಕೆ ಲಭ್ಯತೆ ಅದು ಅವಳ ಯೌವನದ ಮುಕ್ತಾಯದವರೆಗೆ ಅಥವಾ ಆಕರ್ಷಣೆ ಕೊಡುವವರೆಗೆ.
- ದೇವತೆಗೆ ಅರ್ಪಣೆ / ವಿವಾಹವಾಗುವ ವಯಸ್ಸು 8-12 ಹಾಗೂ ಉಪಭೋಗಕ್ಕೆ ಲಭ್ಯವಾಗುವ ವಯಸ್ಸು 13-15 ಅವರ ಲೈಂಗಿಕ ಜೀವನ ಮುಕ್ತಾಯ 30-35 ವಯಸ್ಸಿಗೆ.
- ದೇವದಾಸಿಯು ನಿರ್ದಿಷ್ಟ ಆಚರಣೆಗಳಿಗೆ ಮತ್ತು ಸಮಾರಂಭ ದೇವತೆಯ ಜಾತ್ರೆಗಳಲ್ಲಿ ಜಾನಪ್ರದೀಯ ನೃತ್ಯ ಸಂಗೀತಗಳನ್ನೊಳಗೊಂಡು ಸಾಂಪ್ರದಾಯಕ ಚಟುವಟಿಕೆಗಳಲ್ಲಿ ತೊಡುಗುವದು.
- ದೇವದಾಸಿಯರು ವಿಧ್ಯುಕ್ತ ವೈವಾಹಿಕ ಜೀವನದಿಂದ ವಿಮುಖರು (ಕಾಯ್ದೆ ಕಾನೂನುಗಳ ವ್ಯತಿರಿಕ್ತವಾಗಿಯೂ ಎಲ್ಲ ಸಹಜ ವ್ಯವಹಾರಿಕ ಉದ್ದೇಶಗಳಿಂದ) ಯಾಕೆಂದರೆ ಅವರು ನಿತ್ಯ ಸುಮಂಗಲಿಯರೆಂಬ ಹಣೆಪಟ್ಟಿ ಅವರು ಆದಾಗಲೇ ವಿವಾಹ ಆಗಿದ್ದಾರೆಂಬರ್ಥ.
- ಆದ್ದರಿಂದ ಇವರು ಸಮಾಜದಲ್ಲಿ ಗೌರವಯುತವಾದ ಸ್ಥಾನಮಾನಗಳಾದ 'ತಾಯಿ' ಮತ್ತು 'ಹೆಂಡತಿ' ಗಳಿಂದ ವಂಚಿತರಾಗಿರುತ್ತಾರೆ.
- ಈ ರೀತಿ ಅರ್ಪಣೆಗೊಂಡ ಹೆಣ್ಣು ಸಾಮಾಜಿಕವಾಗಿ ಲೈಂಗಿಕ ವೃತ್ತಿಗೆ ಅಸಹಾಯಕಳಾಗಿರುತ್ತಾಳೆ. ಮತ್ತು ಅದಕ್ಕಾಗಿ ಸಾಗಾಟ ಮತ್ತು ಮಾರಾಟಕ್ಕೆ ಸಹಜವಾಗಿ ಒಳಪಡುತ್ತಾಳೆ.

ಪ್ರಾದೇಶಿಕ ಭಿನ್ನತೆಯ ಕಾರಣದಿಂದ ಮತ್ತು ಕಾಲಾಂತರದಲ್ಲಿ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಸ್ಥಿತ್ಯಂತರಗಳಿಂದ ಕ್ಲಿಷ್ಟ ವೈವಿಧ್ಯತೆಗಳನ್ನು ಅನುಸರಿಸಿಕೊಂಡು ಬರಲಾಗುತ್ತಿದೆ. ಇವು ಆ ಪದ್ಧತಿಗೆ ಹೊಂದಿಕೊಂಡ ಮೂರು ಮುಖ್ಯ ಕಾರ್ಯಗಳಾದ - ಧಾರ್ಮಿಕ, ಮನರಂಜನೆ ಮತ್ತು ಲೈಂಗಿಕ ಸೇವೆಗಳ ದೇವದಾಸಿಯರ ಜೀವನದ ಮೇಲೆ ಅನುಭವಿಕ ಪರಿಣಾಮಗಳನ್ನು ಬೀರಿವೆ. ಈ ವರದಿಯಲ್ಲಿ ಚರ್ಚೆ ಮಾಡಿದ ನಮೂನೆಗಳು ಮೆಹಬೂಬನಗರ ಹಾಗೂ ಚಿತ್ತೂರ (ಆಂಧ್ರಪ್ರದೇಶ) ಮತ್ತು ಬೆಳಗಾವಿ (ಕರ್ನಾಟಕ) ಜಿಲ್ಲೆಗಳಲ್ಲಿ ಅನುಭವಕ್ಕೆ ಬಂದವುಗಳಿಗೆ ಮಾತ್ರ ಸೀಮಿತವಾಗಿವೆ.

ಈಗಾಗಲೇ ಗಮನಿಸಿದಂತೆ ಒರಿಸ್ಸಾ, ಗೋವಾ ತಮಿಳು ನಾಡು ಹಾಗೂ ಮಹಾರಾಷ್ಟ್ರ ರಾಜ್ಯಗಳ ಕೆಲವು ನಿರ್ದಿಷ್ಟ ಭಾಗಗಳಲ್ಲಿ ಹೆಚ್ಚಿನ ವೈವಿಧ್ಯತೆಗಳು ಇದ್ದದ್ದು ಕಂಡು ಬರುತ್ತದೆ. ಇಲ್ಲಿ ವಿವರಿಸಲಾದ ಪ್ರಕಾರಗಳಲ್ಲಿ ಅರ್ಪಿತಗೊಂಡ ಹೆಣ್ಣುಗಳ ಹಾಗೂ ದೇವತೆಯ ಪಾವಿತ್ರ್ಯದ ದೃಷ್ಟಿ ಕೋನಗಳಿಂದ ಹಾಗೂ ವೈಯಕ್ತಿಕ ಅನುಭವಗಳ ಆಧಾರದ ಮೇಲಿಂದ ವಿಭಿನ್ನ ವೈವಿಧ್ಯತೆಗಳನ್ನು ಕಾಣಬಹುದು. ಆಂಧ್ರ ಪ್ರದೇಶದಲ್ಲಿ ಗಮನಿಸಿದಂತೆ ಕೆಲವು ಹಿರಿಯ ದೇವದಾಸಿಯರು ತಮ್ಮ ಕೊರಳಲ್ಲಿ ಧರಿಸಿದ ಮಣಿಗಳು ಅವರ ಮದುವೆಯ ಸ್ಥಾನಮಾನ ತೋರಿಸುತ್ತವೆ. ಕೆಲವರು ಇಂತಹ ಮಣಿಹಾರಗಳನ್ನು ತೊಡುವುದನ್ನು ಹಾಗೂ ಇತರ ಆಚರಣೆಗಳನ್ನು ಬಿಟ್ಟು ಬೇರೆ ರೀತಿಯನ್ನು ಅನುಸರಿಸಿದ್ದಾರೆ. ಉದಾ : ಬೆಳಗಾವಿ (ಕರ್ನಾಟಕ) ಯಲ್ಲಿ ಕಂಡಂತೆ ಸಾಮಾನ್ಯ ವಿವಾಹಿತ ಮಹಿಳೆಯರಂತೆಯೇ ಮಂಗಳ ಸೂತ್ರವನ್ನು ಧರಿಸುತ್ತಾರೆ. ಇನ್ನು ಕೆಲವರು ಒಳ್ಳೆಯ ಶಿಕ್ಷಣ ಪಡೆದಿದ್ದು, ಸಾಮಾಜಿಕವಾಗಿ ಸುಧಾರಿಸಿದ್ದು ಅವರು ಕಾಯ್ದೆಯ ಅಂಶಗಳನ್ನು ಅವಕಾಶಗಳನ್ನು ಅರಿತುಕೊಂಡು ಅಧಿಕೃತ ವಿವಾಹ ಬಂಧನವನ್ನು ಗ್ರಹಿಸಿಕೊಂಡಿದ್ದಾರೆ.